ರಾಜ್ಯದಲ್ಲಿರುವ ಗ್ರಾಹಕರ ಸಂಘಗಳ ಕುರಿತು

2340(3033) : ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಗ್ರಾಮ ಮಟ್ಟದಲ್ಲಿ ತಾಲ್ಲೂಕು ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ, ನಗರ ಮಟ್ಟದಲ್ಲಿ ಹಾಗೂ ರಾಜ್ಯ ಮಟ್ಟದಲ್ಲಿರುವ ಗ್ರಾಹಕರ ಸಹಕಾರ ಸಂಘಗಳ ಸಂಖ್ಯೆ ಎಷ್ಟು?

ಶ್ರೀ ಹೆಚ್. ವಿಶ್ವನಾಥ್ (ಸಹಕಾರ ಸಚಿವರು)

ಆ) ರಾಜ್ಯದಲ್ಲಿ ಒಟ್ಟು 1675 ಗ್ರಾಹಕರ ಸಹಕಾರ ಸಂಘಗಳಿದ್ದು, ವಿವರ ಈ ಕೆಳಗಿನಂತಿದೆ.

1.	ಗ್ರಾಮ ಮಟ್ಟದಲ್ಲಿನ ಗ್ರಾಹಕರ ಸಹಕಾರ ಸಂಘಗಳು	–	1093
2.	ತಾಲ್ಲುಕು ಮಟ್ಟದಲ್ಲಿನ ಗ್ರಾಹಕರ ಸಹಕಾರ ಸಂಘಗಳು	–	34
3.	ಜಿಲ್ಲಾ ಮಟ್ಟದಲ್ಲಿನ ಗ್ರಾಹಕರ ಸಹಕಾರ ಸಂಘಗಳು	–	23
4.	ನಗರ ಮಟ್ಟದಲ್ಲಿನ ಗ್ರಾಹಕರ ಸಹಕಾರ ಸಂಘಗಳು	–	521
5.	ರಾಜ್ಯ ಮಟ್ಟದಲ್ಲಿನ ಗ್ರಾಹಕರ ಸಹಕಾರ ಸಂಘಗಳು.	–	04
	ಒಟ್ಟು		**1675**

ರಾಜ್ಯದಲ್ಲಿರುವ ಸಹಕಾರಿ ಉಣ್ಣೆ ಗಿರಣಿಗಳು ಕುರಿತು

2341(3034) : ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಉಣ್ಣೆ ಸಹಕಾರಿ ಗಿರಣಿಗಳು ಯಾವುವು;

ಆ) 1999–2000, 2000–2001ರಲ್ಲಿ ಅವು ಗಳಿಸಿದ ನಿವ್ವಳ ಲಾಭ ಹಾಗೂ ನಷ್ಟ ಎಷ್ಟು;

ಇ) 31.3.2001ಕ್ಕೆ ನಷ್ಟದಲ್ಲಿರುವ ಉಣ್ಣೆ ಗಿರಣಿಗಳು ಹೊಂದಿದ ಕೊಡಿ ಬಿದ್ದ ಹಾನಿ ಎಷ್ಟು?

ಶ್ರೀ ಹೆಚ್. ವಿಶ್ವನಾಥ್ (ಸಹಕಾರ ಸಚಿವರು)

ಅ) ರಾಜ್ಯದಲ್ಲಿ 2 ಉಣ್ಣೆ ನೂಲಿನ ಗಿರಣಿಗಳು ನೋಂದಣಿಯಾಗಿದ್ದು, ವಿವರಗಳು ಕೆಳಕಂಡಂತಿದೆ.

1. ಕರ್ನಾಟಕ ಉಣ್ಣೆ ಸಹಕರಿ ನೂಲಿನ ಗಿರಣಿ (ನಿ), ರಾಣೆಬೆನ್ನೂರು, ಹಾವೇರಿ ಜಿಲ್ಲೆ.
2. ಕನಕದಾಸ ಉಣ್ಣೆ ಸಹಕಾರಿ ನೂಲಿನ ಗಿರಣಿ (ನಿ), ಬೆನಕಟ್ಟಿ, ಬೆಳಗಾಂ ಜಿಲ್ಲೆ.

ಈ ಎರಡೂ ಯೋಜನೆಗಳು ಇನ್ನೂ ಪ್ರಾರಂಭವಾಗಬೇಕಿದ್ದು, ಎನ್‌ಸಿಡಿಸಿ ಸಾಲದ ಪ್ರಸ್ತಾವನೆಗಳು ಪರಿಶೀಲನೆ ಹಂತದಲ್ಲಿರುತ್ತದೆ.

ಲಾಭ ನಷ್ಟದ ವಿವರ ಈ ಕೆಳಕಂಡಂತಿದೆ

			1999–2000	2000–01
1.	ಕರ್ನಾಟಕ ಉಣ್ಣೆ ಸಹಕಾರಿ ನೂಲಿನ ಗಿರಣಿ (ನಿ), ರಾಣಿಬೆನ್ನೂರು. ಹಾವೇರಿ ಜಿಲ್ಲೆ	ಲಾಭ	--	55,037,28
		ನಷ್ಟ	1,45,002,10	--
2.	ಕನಕದಾಸ ಉಣ್ಣೆ ಸಹಕಾರಿ ನೂಲಿನ ಗಿರಣಿ (ನಿ), ಬೆನಕಟ್ಟಿ, ಬೆಳಗಾಂ ಜಿಲ್ಲೆ	ಲಾಭ	70,329.00	--
		ನಷ್ಟ	--	46,760.00

ಇ) ದಿನಾಂಕ 31.3.2001ಕ್ಕೆ ಇದ್ದಂತೆ ಕೂಡಿಬಿದ್ದಹಾನಿ ಕೆಳಕಂಡಂತಿದೆ.

1. ಕರ್ನಾಟಕ ಉಣ್ಣೆ ಸಹಕಾರಿ ನೂಲಿನ ಗಿರಣಿ ನಿ., ರಾಣಿಬೆನ್ನೂರು, ಹಾವೇರಿ ಜಿಲ್ಲೆ. ರೂ. 89,964,82
2. ಕನಕದಾಸ ಉಣ್ಣೆ ಸಹಕಾರಿ ನೂಲಿನ ಗಿರಣಿ ನಿ., ಬೆನಕಟ್ಟಿ, ಬೆಳಗಾಂ ಜಿಲ್ಲೆ. ರೂ. 34,080.70

ಶಿವಮೊಗ್ಗ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿನ ಸಾರ್ವಜನಿಕ ಪಡಿತರ ವಿತರಣೆ ವ್ಯವಸ್ಥೆ

2345(2963) : ಶ್ರೀ ಚಂದ್ರಶೇಖರಪ್ಪ ಹೆಚ್.ಎಂ. (ಶಿವಮೊಗ್ಗ) ಮಾನ್ಯ ಆಹಾರ ಮತ್ತು ನಾಗರಿಕರ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಶಿವಮೊಗ್ಗ ನಗರ ಹಾಗೂ ಗ್ರಾಮಾಂತರ ಪ್ರದೇಶಗಳ ವ್ಯಾಪ್ತಿಯಲ್ಲಿ ವಾಸ ಮಾಡುತ್ತಿರುವ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳ ಸಮೀಕ್ಷೆ ನಡೆಸಲಾಗಿದೆಯೇ;

ಈ ಕುಟುಂಬಗಳ ಸಂಖ್ಯೆ ಎಷ್ಟು; ಈವರೆಗೆ ವಿತರಿಸಲಾಗಿರುವ ಹಳದಿ ಪಡಿತರ ಚೀಟಿ ಅರ್ಜಿಗಳ ಸಂಖ್ಯೆ ಎಷ್ಟು; ಹಾಲಿ ಇರುವ ವಿವಿಧ ನಮೂನೆಯ ಪಡಿತರ ಚೀಟಿ ಹೊಂದಿರುವ ಕುಟುಂಬಗಳ ವಿವರ ನೀಡುವುದು;

ಆ) ಶಿವಮೊಗ್ಗ ನಗರ ವ್ಯಾಪ್ತಿಯಲ್ಲಿ ಈಗಾಗಲೇ ಪಡಿತರ ಚೀಟಿ ವಿತರಿಸಲು ಗುರುತಿಸಲಾಗಿರುವ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳ ಸಂಖ್ಯೆ ಎಷ್ಟು, ನೀಡಲು ಉದ್ದೇಶಿಸಿರುವ ಪಡಿತರ ಚೀಟಿ ಸಂಖ್ಯೆ ಎಷ್ಟು;

ಇ) ಹೊಸದಾಗಿ ಹಳದಿ ಪಡಿತರ ಚೀಟಿ ಕೋರಿ ಅರ್ಜಿ ಸಲ್ಲಿಸಿರುವ ಕೊಳಚೆ ಪ್ರದೇಶದ ನಿವಾಸಿಗಳ ಸಂಖ್ಯೆ ಎಷ್ಟು;

ಈ) ಕೊಳಚೆ ಪ್ರದೇಶದ ಹೊರಗಡೆ ವಾಸ ಮಾಡುತ್ತಿರುವ ಹಳದಿ ಪಡಿತರ ಚೀಟಿ ಕೋರಿ ಅರ್ಜಿ ಸಲ್ಲಿಸಿರುವವರ ಸಂಖ್ಯೆ ಎಷ್ಟು?